ಸಿ ಸಿ 1208/2019

ಪಿ ಡಬ್ಲ್ಯೂ-1

ಸಾಕ್ಷಿದಾರರನ್ನು ಕರೆಯಿಸಿ, ಪ್ರಮಾಣವಚನ ಬೋಧಿಸಲಾಯಿತು.

ದಿನಾಂಕಃ 12.06.2024

ಮುಂದುವರೆದ ಪಾಟಿ ಸವಾಲುಃ ಶ್ರೀ ಡಿ ಕೆ ಎಂ ಆರೋಪಿ ಪರ ವಕೀಲರಿಂದ

ನಮ್ಮ ಊರಿನ ವಿಜಯ ಕುಮಾರ್ ನನಗೆ ಸುಮಾರು 25 ವರ್ಷಗಳಿಂದ ಪರಿಚಯ. ನಾನು ಮತ್ತು ವಿಜಯಕುಮಾರ್ ವಿಶ್ವಾಸದಲ್ಲಿದ್ದೇವೆ ಎಂದರೆ ಸರಿ. ಈ ಪ್ರಕರಣದ ಕುರಿತು ನಾನು ವಿಜಯಕುಮಾರ್ ಅವರ ಬಳಿ ಹೇಳಿರುವುದಿಲ್ಲ. ನೋಟೀಸ್ ಆರೋಪಿಗೆ ಜಾರಿಯಾಗಬಾರದು ಎಂಬ ಉದ್ದೇಶದಿಂದಲೇ ತಪ್ಪು ವಿಳಾಸವನ್ನು ನೀಡಿ ಮತ್ತು ಆರೋಪಿಯು ಇಲ್ಲದ ಸಂದರ್ಭದಲ್ಲಿ ನೋಟೀಸ್ ನೀಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಯ ಹಿರಿಸಾವೆಯ ವಿಳಾಸವನ್ನು ನಾನು ವಕೀಲರಿಗೆ ನೀಡಿರುತ್ತೇನೆ. ನೋಟೀಸ್ ನ್ನು ಆರೋಪಿಯ ಯಾವ ವಿಳಾಸಕ್ಕೆ ಕಳುಹಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸದರಿ ನೋಟೀಸ್ ಏನಾಯಿತು ಎಂದು ನನಗೆ ಗೊತ್ತಿಲ್ಲ. ಚೆಕ್ ಅಮಾನ್ಯಗೊಂಡ ನಂತರ ನಾನು ಆರೋಪಿಯನ್ನು ಭೇಟಿ ಮಾಡಿಲ್ಲ. ಆರೋಪಿಯು ಕೆಲಸ ಮಾಡುವಾಗ ಚೆಕ್ ಬುಕ್ ತೆಗೆದುಕೊಂಡು ಹೋಗಿದ್ದು, ಸದರಿ ಚೆಕ್ ಬುಕ್ ಕಳೆದುಹೋಗಿದೆ ಎಂದರೆ ಸರಿಯಲ್ಲ. ಕಳೆದುಹೋಗಿರುವ ಆರೋಪಿಯ ಚೆಕ್ ಬುಕ್ ನ್ನು ದುರುಪಯೋಗಪಡಿಸಿಕೊಂಡು ವಿಜಯಕುಮರ್ ರವರು ಆರೋಪಿಯ ಸಹಿಯನ್ನು ನಕಲು ಮಾಡಿಕೊಂಡು ನನ್ನ ಮೂಲಕ ಈ ಪ್ರಕರಣವನ್ನು ಮತ್ತು ವಿಜಯಕುಮಾರ್ ರವರೂ ಸಹ ಪ್ರಕರಣ ಸಂಖ್ಯೆ ಸಿ ಸಿ 193/2020 ರಂತೆ ಪ್ರಕರಣವನ್ನು ದಾಖಲಿಸಿದ್ದಾರೆ ಎಂದರೆ ಸರಿಯಲ್ಲ. ವಿಜಯಕುಮಾರ್ ರವರು ಪೂರ್ಣಚಂದ್ರ ಅವರ ಮೂಲಕ ಸಿ ಸಿ ನಂಬರ್ 1326/2022 ಮತ್ತು ಪೂರ್ಣಚಂದ್ರ ಅವರ ಹೆಂಡತಿ ಹೇಮ ಅವರ ಮೂಲಕ ಸಿ ಸಿ 1325/2022 ರಂತೆ ಪ್ರಕರಣವನ್ನು ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ. ನಾವು ಒಬ್ಬರಿಗೊಬ್ಬರು ಶರೀಕ್ಕಾಗಿ ಆರೋಪಿಯ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ನಾನೇ ಸಾಲ ಮಾಡಿಕೊಂಡಿದ್ದು ಆರೋಪಿಗೆ ಹಣವನ್ನು ಸಾಲವಾಗಿ ನೀಡಲು ನನಗೆ ಆರ್ಥಿಕವಾಗಿ ಸಾಮರ್ಥ್ಯವಿಲ್ಲ ಎಂದರೆ ಸರಿಯಲ್ಲ. ಆರೋಪಿಯು ಆರ್ಥಿಕವಾಗಿ ಸಮರ್ಥನಾಗಿದ್ದು, ನನ್ನಿಂದ ಸಾಲ ಕೇಳುವ ಯಾವುದೇ ದರದ್ದು ಅವರಿಗೆ ಇರಲಿಲ್ಲ ಎಂದರೆ ಸರಿಯಲ್ಲ. ಆರೋಪಿಯು ನನಗೆ ನಿ ಪಿ 1 ನ್ನು ನೀಡಿಲ್ಲ ಎಂದರೆ ಸರಿಯಲ್ಲ.

ನಾನು ಚೆಕ್ ನ್ನು ಬ್ಯಾಂಕ್ ಗೆ ಹಾಜರುಪಡಿಸಿದಾಗ ಆರೋಪಿಯ ಖಾತೆಯಲ್ಲಿ ಹಣವಿಲ್ಲ ಎಂದು ವಾಪಸ್ಸಾಗಿರುತ್ತದೆ. ಚೆಕ್ ಬುಕ್ ಕಳೆದುಹೋಗಿರುವುದರಿಂದ ಆರೋಪಿಯು ದೂರನ್ನು ಕೊಟ್ಟು ಬ್ಯಾಂಕ್ ಖಾತೆಯನ್ನು ಮುಕ್ತಾಯಗೊಳಿಸಿರುತ್ತಾರೆ ಎಂದರೆ ಸರಿಯಲ್ಲ. ಅಕ್ರಮ ಲಾಭ ಪಡೆಯುವ ಉದ್ದೇಶದಿಂದ ಸುಳ್ಳು ಪ್ರಕರಣವನ್ನು ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಸ.ಇ.ಎ.ಒ.,

Sd/-

3 ನೇ ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ಚನ್ನರಾಯಪಟ್ಟಣ.